ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಿಲ್ಲೆಗಳಲ್ಲಿ ಎಲ್ಲಿ ದೊಡ್ಡ ದೊಡ್ಡ ನದಿಗಳಿಲ್ಲವೋ ಅಲ್ಲಿರತಕ್ಕ ಸಣ್ಣ ಸಣ್ಣ ಹೊಳೆಗಳನ್ನು exploit ಮಾಡಿ ಮೈನರ್ ಇರ್ರಿಗೇಷನ್ನಿಗೆ ಒಂದು ಪೊಟೆಂಷಿಯಂ ಬರುವ ಹಾಗೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂಬುದು ಬಹಿಟ್ಟಿನಲ್ಲಯೇ ಕಾಣುತ್ತದೆ. ಕೋರಾರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ಬಿಜಾಪುರ—ಇವು ಬರಗಾಲಕ್ಕೆ ಹೆಸರುವಾಸಿಯಾಗಿರುವುದಕ್ಕೋಸ್ಕರ ಸರ್ಕಾರ ಹೆಚ್ಚಿಗೆ ಈ ಜಿಲ್ಲೆಗಳಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೋಸ್ಕರ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಮೈನರ್ ಇರ್ರಿಗೇಷನ್ನಿನ ಸಂಬಂಧವಾಗಿ ಮಾನ್ಸರ್ ಪ್ಲಾನ್ ತಯಾರು ಮಾಡುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ಈ ಮಾನ್ಯ ಸಭೆಗೇ ಹೇಳಿದ್ದೇನೆ. ಈ ಮಾನ್ಸರ್ ಪ್ಲಾನಿಗೆ ಎಷ್ಟು ಖರ್ಚಾಗುತ್ತದೆಂಬುದನ್ನು ಲೆಕ್ಕ ಹಾಕುತ್ತಾ ಇದ್ದೇವೆ. ಈಗ ಇರತಕ್ಕ 12 ಲಕ್ಷದ ಜೊತೆಗೆ ಇನ್ನೂ 12 ಲಕ್ಷ ಎಕರೆ ಸಾಗು ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಎಷ್ಟು ದಿವಸಗಳು ಬೇಕಾಗುತ್ತವೆ, ಎಷ್ಟು ಸಿಬ್ಬಂದಿ ಬೇಕು ಎಂಬ ಬಗ್ಗೆ ಒಂದು ಅಂದಾಜನ್ನು ತಯಾರುಮಾಡುತ್ತಾ ಇದ್ದೇವೆ. ಸುಮಾರು 100 ಕೋಟಿ ರೂಪಾಯಿಗಳಾದರೂ ಈಗಿನ ಕೆಲಸಗಳಿಗೆ ಬೇಕಾಗುತ್ತವೆ.

Unauthorised collection of National Defence Fund in Raichur District.

*Q.—372. Sri VEERABHADRAPPA ERAPPA (Yelburga).—

Will the Government be pleased to state:—

(*a*) whether it has come to their notice that National Defence Fund has been unauthorisedly collected in Raichur District;

(*b*) the taluks in which the fund has been so collected;

(*c*) whether it is a fact that the amount so collected has not been credited;

(*d*) if so, the action they propose to take in this behalf?

A.—Sri S. NIJALINGAPPA (Chief Minister).—

(*a*) No.
(*b*) Does not arise.
(*c*) Does not arise.
(*d*) Does not arise.

ಶ್ರೀ ವೀರಭದ್ರಪ್ಪ ಈರಪ್ಪ.—ಗ್ರಾಮಾಧಿಕಾರಿಗಳಿಗೆ ನಿಧಿ ಸಂಗ್ರಹ ಮಾಡಲಕ್ಕೆ ಅನುಮತಿ ಕೊಟ್ಟಿದ್ದರೂ ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆಗಳಲ್ಲಿ ರೈತರು ವಸೂಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಕಡೆಗಳಲ್ಲಿ ಚೆನ್ನಾಗಿ ನಡೆದಿದೆ. ಒಂದು ಗ್ರಾಮದಲ್ಲಿ ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೆಲವು ಮುಖಂಡರುಗಳು ರಕ್ಷಣಾನಿಧಿಗಾಗಿ ಎಂದು ಒಂದು ನಾಟಕವನ್ನಾಡಿಸಿ ಅದರಿಂದ ಬಂದಂಥ ಹಣವನ್ನು ಜಮಾ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಆ ಆಪಾದನೆ ಸುಳ್ಳು.

ಶ್ರೀ ವೀರಭದ್ರಪ್ಪ ಈರಪ್ಪ.—ಅದನ್ನು ಸರ್ಕಾರದ ಗಮನಕ್ಕೆ ತಂದುಕೊಟ್ಟರೆ ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ಅದು ಸರ್ಕಾರದ ಗಮನಕ್ಕೆ ಬಂದು ಪರಿಶೀಲನೆಯಾಗಿದೆ. ಆದರೆ ಆ ದೂರು ಸುಳ್ಳು ಎಂದು ಆಗಿದೆ.